ದೇವು ಪತ್ತಾರ

# ಚೆನ್ನಣ್ಣ ಎಂಬ ದಂತಕತೆ

ಇತ್ತೀಚೆಗೆ ನಿಧನರಾದ ಲೇಖಕ ಚೆನ್ನಣ್ಣ ವಾಲೀಕಾರ (ಏಪ್ರಿಲ್ 6, 1943– ನವೆಂಬರ್ 24, 2019) ಅವರ ಬದುಕು, ವ್ಯಕ್ತಿತ್ವ ಮತ್ತು ಸಾಹಿತ್ಯವನ್ನು ಚಿತ್ರಿಸುವ ಬರಹ ಇಲ್ಲಿದೆ.

ಬದುಕಿರುವಾಗಲೇ ದಂತಕತೆಯಾದವರು 'ನಮ್ಮ' ಚೆನ್ನಣ್ಣ ವಾಲೀಕಾರ. ಹೀಗೆ ದಂತಕತೆಯಾಗುವುದು ಸಹಜವೂ ಅಲ್ಲ, ಸುಲಭವೂ ಅಲ್ಲ, ಹಾಗೆಯೇ ಅನಪೇಕ್ಷಣೀಯ ಕೂಡ. ಸೃಜನಶೀಲ ಕವಿತೆ ಬರೆಯುವ ವ್ಯಕ್ತಿಯೇ ಕತೆಯಾಗಿ ಬಿಡುವ ಸೋಜಿಗ ಅಪರೂಪ. ಆದರೆ, ಅದನ್ನೇ ಅಪೂರ್ವ ಎಂದು ಹೇಳಲು ಸಾಧ್ಯವಿಲ್ಲ. ನಮ್ಮ ನಡುವೆ ರಕ್ತ–ಮಾಂಸಗಳೊಂದಿಗೆ ಓಡಾಡುವ ಜೀವವೊಂದು 'ಲೆಜೆಂಡ್' ಆಗಿ ಬಿಡುವುದಕ್ಕೆ ಒಂದೇ ಕಾರಣ ಇರುವುದಿಲ್ಲ. ಅದಕ್ಕೆ ಕೇವಲ ಬದುಕುತ್ತಿದ್ದ ವ್ಯಕ್ತಿ ಹಾಗೂ ಅವನ ನಡವಳಿಕೆ ಮಾತ್ರ ಕಾರಣವಲ್ಲ. ಅವು ಕೇವಲ ವ್ಯಕ್ತಿ ಸೀಮಿತವಲ್ಲ. ಆಡಿಕೊಳ್ಳುವುದಕ್ಕೆ ಟೈಂಪಾಸ್‌ಗೆ ಅಗತ್ಯವಿರುವ 'ಸರಕು' ಸುಲಭವಾಗಿ ದೊರೆಯುತ್ತದೆ ಎಂಬುದು ಮೇಲ್ನೋಟಕ್ಕೆ ಪ್ರಮುಖವಾಗಿ ಕಾಣಿಸುವ ಕಾರಣ. ಆದರೆ, ಅದಷ್ಟೇ ಅಲ್ಲ. ಅಂದರೆ ಕಂಡದ್ದಷ್ಟೇ ಸತ್ಯ ಅಲ್ಲ. ದಂತಕತೆಯಾಗುವ ಪ್ರಕ್ರಿಯೆ ಹಠಾತ್ ಸಂಭವಿಸುವುದಿಲ್ಲ ಕೂಡ. ಹಾಗೆಯೇ ಕತೆಯಾಗುವುದಕ್ಕೆ ಅಗತ್ಯವಿರುವ ಗುಣಲಕ್ಷಣ ಮಾತ್ರ ಸಾಕಾಗುವುದಿಲ್ಲ. 'ಘನ'ವಾಗದ ಅಥವಾ 'ಇಲ್ಲ' ಎಂಬಂತೆ ಪದೇ ಪದೇ ಸಾಬೀತಾಗುವುದು ಕೂಡ ಅಗತ್ಯವಾಗಿರುತ್ತದೆ. ಸರಳವಾಗಿ ತೇಲಿ